ದಿನಾಂಕ 27-02-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ 2ನೇ ಎದುರುದಾರರ ಪರ ವಕೀಲರಿಂದಃ-

ನಾನು 2ನೇ ಎದುರುದಾರರ ಕಂಪನಿಯ ಅಸಿಸ್ಟೆಂಟ್ ಮ್ಯಾನೇಜರ್ ಆಗಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| ನಿಆರ್-1 | ಅಧಿಕಾರ ಪತ್ರ |
| ನಿಆರ್-2 | ಪಾಲಿಸಿಯ ದೃಢೀಕೃತ ನಕಲು |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಆರ್-1 ಮತ್ತು ನಿಆರ್-2 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಕೆ.ಬಿ.ಎಸ್., ವಕೀಲರಿಂದಃ-

ಈ ಪ್ರಕರಣದ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ, ಆದರೆ ಪೊಲೀಸ್ ದಾಖಲೆಗಳ ಆಧಾರದ ಮೇರೆಗೆ ಮಾಹಿತಿ ಇದೆ. ಅಪಘಾತದ ಸ್ಥಳಕ್ಕೆ ಭೇಟಿ ನೀಡಿ ಅಪಘಾತ ಹೇಗಾಯಿತು ಎಂದು ನಮ್ಮ ಕಂಪನಿಯವರಾಗಲೀ, ನಾನಾಗಲೀ ಪರಿಶೀಲನೆ ಮಾಡಿಲ್ಲ. ಕೆಎಲ್-15-ಎ-1988 ವಾಹನಕ್ಕೆ ಸಂಬಂಧಪಟ್ಟಂತೆ ನಮ್ಮ ಕಂಪನಿಯಿಂದ ಪಾಲಿಸಿ ನೀಡಿದ್ದೇವೆ. ಪೊಲೀಸರು ಸದರಿ ವಾಹನದ ಚಾಲಕನ ನಿರ್ಲಕ್ಷತೆಯಿಂದ ಅಪಘಾತ ಆಗಿದೆ ಎಂದು ದೋಷಾರೋಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ತಪ್ಪಾಗಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಚನ್ನಪಟ್ಟಣದ ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸು ಪೆಂಡಿಂಗ್ ಇದೆ ಎಂದರೆ ಗೊತ್ತಿಲ್ಲ. ಈ ಕೇಸಿನಲ್ಲಿ ಮೇಲ

ಹೇಳಿದ ಚಾಲಕನ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿರುವ ವಿಚಾರ ಗೊತ್ತಿದೆ. ಸದರಿ ದೋಷಾರೋಪಣಾ ಪತ್ರವನ್ನು ಪ್ರಶ್ನಿಸಿ ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಯಾವುದೇ ರಿಟ್ ಪಿಟಿಶನ್ ಸಲ್ಲಿಸಿಲ್ಲ. ನಮ್ಮ ಕಂಪನಿ ಪರವಾಗಿ ತನಿಖೆ ಮಾಡಿಸಿ, ರಿಪೋರ್ಟ್‌ಗಳನ್ನು ಸಲ್ಲಿಸುತ್ತಿಲ್ಲ. ಮೇಲೆ ಹೇಳಿದ ವಾಹನದ ಚಾಲಕ ನಿರ್ಲಕ್ಷತೆಯಿಂದ ರಸ್ತೆಯ ಬಲಭಾಗದಲ್ಲಿದ್ದ ಬಸ್ಸು ಯಾವುದೇ ಮುನ್ಸೂಚನೆ ಇಲ್ಲದೇ ರಸ್ತೆಯ ಎಡಭಾಗಕ್ಕೆ ಹೋಗಿ ಹಿಂಬದಿಯಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ನಮ್ಮ ಬಸ್ಸು ಡಿಕ್ಕಿ ಹೊಡೆಯಿತು ಎಂದರೆ ಸರಿಯಲ್ಲ. ಮೇಲೆ ಹೇಳಿದ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆದದ್ದು ಎಂದರೆ ಸಾಕ್ಷಿಯು ದ್ವಿಚಕ್ರ ವಾಹನದ ಸವಾರ ಅಂತರ ಕಾಪಾಡದೇ ಬಸ್ ಹಿಂಬದಿಗೆ ಡಿಕ್ಕಿ ಹೊಡೆದಿದ್ದಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿಲ್ಲ. ನಮ್ಮ ಕಂಪನಿಯಲ್ಲಿ ವಿಮೆ ಮಾಡಿಸಿದ ಮೇಲೆ ಹೇಳಿದ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಪರಿಹಾರ ಪಾವತಿಸುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಸವಾರ ನಿಧಾನವಾಗಿಯೇ ಚಲಾಯಿಸುತ್ತಿದ್ದರು, ಅವರ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಸವಾರನ ನಿರ್ಲಕ್ಷತೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.